ದಿನಾಂಕ 02-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ.ವಿ.ವೈ., ವಕೀಲರಿಂದಃ-

3. ನಿಪಿ-12ನ್ನು ಯಾರು ತಯಾರು ಮಾಡಿಸಿದ್ದು ಎಂದರೆ ನಾನೇ ಮಾಡಿಸಿದ್ದು. ನಿಪಿ-12ರಲ್ಲಿ ಮೋನ್ವಿತ, ಪುಷ್ಪ ಚನ್ನಕೇಶವರವರನ್ನು ಸೇರಿಸಿದ್ದೇವೆ. ಅವರನ್ನು ನೀವು ಈ ದಾವೆಯಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಪುಷ್ಪರವರು ಬೇರೆಯವರ ಪತ್ನಿ ಎಂದು ನುಡಿಯುತ್ತಾರೆ. ನಿಪಿ-12ರಲ್ಲಿ ಪುಷ್ಪ ಚನ್ನಕೇಶವರವರು 1ನೇ ಪ್ರತಿವಾದಿಯ ಎರಡನೇ ಪತ್ನಿ ಎಂದು ಬರೆಸಿದ್ದೀರಿ ಎಂದರೆ ಸಾಕ್ಷಿಯು ಅವರು ಬರೆಸಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-12ರಲ್ಲಿರುವ ಸಹಿ ನನ್ನದೇ. ಮೋನ್ವಿತ ಪುಷ್ಪ ಚನ್ನಕೇಶವರವರ ಒಬ್ಬಳೇ ಮಗಳು ಎಂದು ನೀವೇ ಬರೆಸಿದ್ದೀರಿ ಎಂದರೆ ಸಾಕ್ಷಿಯು ನಾವು ಬರೆಸಿಲ್ಲ, ಬೇರೆ ಯಾರೋ ಬರೆಸಿದ್ದಾರೆ ಎಂದು ನುಡಿಯುತ್ತಾರೆ. ಪುಷ್ಪ, ಮೋನ್ವಿತರವರನ್ನು ಪಾರ್ಟಿಯಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಪುಷ್ಪರವರು ಚನ್ನಕೇಶವರವರ ಹೆಂಡತಿ ಎಂದು ತೋರಿಸಲಿ ಎಂದು ನುಡಿಯುತ್ತಾರೆ. ನಿಪಿ-12ನ್ನು ನಾನೇ ಒಪ್ಪಿಕೊಂಡು ಕಂದಾಯ ಇಲಾಖೆಯಿಂದ ಪಡೆದುಕೊಂಡು ನಾನೇ ಹಾಜರುಪಡಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಯಾವುದೇ ದಾವಾ ಸ್ವತ್ತುಗಳು 1ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇಲ್ಲ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಸ್ವತ್ತುಗಳು ಎಂದು ನುಡಿಯುತ್ತಾರೆ. ಎಲ್ಲಾ ದಾವಾ ಸ್ವತ್ತುಗಳು 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಸ್ವತ್ತುಗಳು ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಸ್ವತ್ತುಗಳು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ವಿಭಾಗ ಕೋರಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.